ನಿರ್ವಹಿಸುತ್ತಿದ್ದ ಮುರಾರಾಚಾರ್ 'ಸದಾರಮೆ' ನಾಟಕದಲ್ಲಿ ಚಂಚಲ ಕುಮಾರಿ ಪಾತ್ರ ಮಾಡಿದ್ದು ಉಡುಪಿಯಲ್ಲಿ. ಅಲ್ಲಿಂದಾಚೆಗೆ ಪ್ರಮುಖ ಸ್ತ್ರೀ ಪಾತ್ರಗಳೆಲ್ಲವೂ ಇವರ ಮಡಿಲಿಗೆ ಬಂದು ಬಿದ್ದವು.

ಪ್ರೋತ್ಸಾಹವಿಲ್ಲದೆ ತೆರೆಮರೆಯಲ್ಲಿದ್ದ ಮುರಾರಾಚಾರ್ ಅವರ ಕಲಾಪ್ರತಿಭೆ ಗುಬ್ಬಿ ಕಂಪೆನಿಯ ಬಹುತೇಕ ನಾಟಕಗಳಲ್ಲಿ ಹೊರಹೊಮ್ಮಿತು. 'ಸತ್ಯಭಾಮ', 'ಚೂಡಾಮಣಿ', 'ಯಶೋದೆ', 'ಮೃಣಾಲಿನಿ', 'ಮಧುಮೋಹಿನಿ', 'ಕಯಾದು' ಹೀಗೆ ಪ್ರಮುಖ ಸ್ತ್ರೀ ಪಾತ್ರಗಳಲ್ಲಿ ಮುರಾರಾಚಾರ್ ಮಿಂಚಿದರು. ಚಂಚಲಕುಮಾರಿ (ಸದಾರಮೆ ನಾಟಕ) ಪಾತ್ರ ಪ್ರೇಕ್ಷಕರನ್ನು ಸೂರೆಗೊಂಡಿತು.

ಪುರುಷ ಪಾತ್ರಗಳನ್ನು ನಿರ್ವಹಿಸುತ್ತಿದ್ದರೂ ಮುರಾರಾಚಾರ್ ಅವರಿಗೆ ಹೆಸರು ತಂದುಕೊಟ್ಟಿದ್ದು ಸ್ತ್ರೀ ಪಾತ್ರಗಳೇ. ಗುಬ್ಬಿ ಕಂಪೆನಿ ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶಗಳಲ್ಲಿ ಸಂಚರಿಸುತ್ತಿದ್ದಾಗ ಅನೇಕ ಗೌರವ – ಪುರಸ್ಕಾರಗಳಿಗೂ ಮುರಾರಾಚಾರ್ ಪಾತ್ರರಾದರು. ಬಣ್ಣದ ಬದುಕಿನಲ್ಲಿ ಮಿಂದ ಆಚಾರ್ ಅವರಿಗೆ ಕೌಟುಂಬಿಕವಾಗಿ ಅನೇಕ ಆಘಾತಗಳು ಎದುರಾದರೂ ಗುಬ್ಬಿ ವೀರಣ್ಣನವರು ತುಂಬಿದ ಧೈರ್ಯದಿಂದ ಅವೆಲ್ಲವೂ ದೂರವಾದವು.

ಸ್ವಂತ ಕಂಪೆನಿಯನ್ನು ಮುರಾರಾಚಾರ್ ಆರಂಭಿಸಿದರಾದರೂ ಅದು ಹೆಚ್ಚು ಸಮಯ ಮುಂದುವರೆಯಲಿಲ್ಲ. ಆ ಬಳಿಕ ಅವರು ಕೆ. ಹಿರಣ್ಣಯ್ಯನವರ ನಾಟಕ ಮಂಡಳಿಗೆ ಸೇರಿ ಅಲ್ಲಿ ಪ್ರಮುಖ ಕಲಾವಿದರಾಗಿ ಖ್ಯಾತಿ ಪಡೆದರು. ನಂತರ ಅವರು ಸೇರಿದ್ದು ಮಾಸ್ಟರ್ ಹಿರಣ್ಣಯ್ಯನವರ 'ಮಿತ್ರ ಮಂಡಳಿ'ಗೆ.

ಆಚಾರ್ 'ಸದಾರಮೆ' ನಾಟಕದಲ್ಲಿ ಮಾಡಿದ ಪಾತ್ರ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿತ್ತು. ಆಗ ಕೊಯಮತ್ತೂರು ಸಿನಿಮಾ ತಯಾರಕ ಚೆಟ್ಟಿಯಾರರು ಇವರನ್ನು ತಮ್ಮ ಚಿತ್ರದಲ್ಲಿ ಸೇರಿಸಿಕೊಳ್ಳಲು ಪ್ರಯತ್ನಿಸಿದರೂ ಅದು ಕಾರ್ಯಗತವಾಗಲಿಲ್ಲ. ಮುಂದೆ ಚಲನಚಿತ್ರಗಳಲ್ಲಿ ಅಭಿನಯಿಸುವುದಕ್ಕೆ ಮುರಾರಾಚಾರ್ ಅವರಿಗೆ ಅನೇಕ ಅವಕಾಶಗಳು ದೊರೆತವು. 'ಭಕ್ತ ಗೋರ ಕುಂಬಾರ' (ನಿರ್ಮಾಣ: ಹೊನ್ನಪ್ಪ ಭಾಗವತರ್)ದಲ್ಲಿ ನಾಮದೇವನ ಪಾತ್ರ. 'ಸದಾರಮೆ' ಚಿತ್ರದಲ್ಲಿ (ಗುಬ್ಬಿ ಕಂಪೆನಿ ತಯಾರಿಕೆ) ಜಯವೀರನ ಪಾತ್ರಗಳನ್ನು ಅಭಿನಯಿಸಿದ ಮುರಾರಾಚಾರ್, ಎಂ.ವಿ. ಸುಬ್ಬಯ್ಯನಾಯ್ಡು, ಎಂ. ನಾಗೇಂದ್ರರಾವ್ ಅವರು ನಿರ್ಮಿಸಿದ 'ಮಹಾತ್ಮ ಕಬೀರ್' ಚಿತ್ರದಲ್ಲಿ ಕಬೀರನ ತಂದೆಯ ಪಾತ್ರದಲ್ಲಿ ಕಾಣಿಸಿಕೊಂಡರು.

ಇವರ ಅದ್ಭುತ ಕಂಠ ಎಲ್ಲರನ್ನೂ ಮೋಡಿ ಮಾಡಿತ್ತು. ರಂಗಭೂಮಿಯಲ್ಲಿ ಸುಶ್ರಾವ್ಯ ಗೀತೆಗಳಿಂದ ಗಮನ ಸೆಳೆದಿದ್ದ ಆಚಾರ್ ಅವರನ್ನು ಪ್ರಸಿದ್ಧ ಸಂಸ್ಥೆ 'ಕೊಲಂಬಿಯಾ' ಆಹ್ವಾನಿಸಿ ಗೀತೆಗಳನ್ನು ಧ್ವನಿ ಮುದ್ರಿಸಿಕೊಂಡಿತು. ಇವರ ಹತ್ತು ಹಾಡುಗಳ ಧ್ವನಿಮುದ್ರಿಕೆ ಹೊರಬಂದಿತು.

ಸುಮಾರು ಐದು ದಶಕಗಳ ಕಾಲ ಕಲಾ ನೌಕೆಯನ್ನು ಸಾಗಿಸಿದ ಮುರಾರಾಚಾರ್, ನಿವೃತ್ತಿ ಬಯಸಿ ದೊಡ್ಡಬಳ್ಳಾಪುರದಲ್ಲಿ ನಾಟಕ ಕಲಿಸುವ ಕಾಯಕದಲ್ಲಿ ತೊಡಗಿಕೊಂಡರು.

ನಟನೆಯ ಗೀಳಿಗೆ ಬಿದ್ದು ಬಾಲ್ಯದಲ್ಲಿಯೇ ಬಣ್ಣ ಹಚ್ಚಿದ ಮುರಾರಾಚಾರ್ ಕಲಾ ವಿಶ್ವದಲ್ಲಿ ಹಲವು ಮಜಲುಗಳನ್ನು ಏರಿದ ಪ್ರತಿಭಾವಂತ. ಸಂಗೀತಾಭಿನಯದಲ್ಲಿ, ಮಹಿಳಾ ಪಾತ್ರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದು ಅವರ ಸಾಧನೆ. ನಾಟಕ, ಸಂಗೀತ, ಚಲನಚಿತ್ರ ಈ ಎಲ್ಲಾ ಕ್ಷೇತ್ರಗಳಲ್ಲೂ ಅವರ ಹೆಜ್ಜೆ ಗುರುತುಗಳನ್ನು ಕಾಣಬಹುದು.

❀